ಅ) ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಗೆ ಸೇರಿದ ಅಡಗಮಾರನಹಳ್ಳಿ ಸರ್ವೆ ನಂ.22ರಲ್ಲಿ ಸುಮಾರು 0.36 ಗುಂಟೆ ಕೆರೆ ಅಂಗಳ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ 0.36 ಗುಂಟೆ ಜಮೀನಿನಲ್ಲಿ ದನಕರುಗಳಿಗೆ ನೀರು ಕುಡಿಯುವ ಗೋಕುಂಟೆ ಆಗಿದ್ದು ಈಗ ಅದರ ಸುತ್ತಲೂ ಮುಳ್ಳು ತಂತಿ ಬೇಲಿ ಹಾಕಿ ಪಕ್ಕದ ಜಮೀನುದಾರರು ಅವರ ಜಮೀನಿಗೆ ಸೇರಿಸಿಕೊಂಡಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಬಂದಿದ್ದಲ್ಲಿ, ತೆರವು ಮಾಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಒತ್ತುವರಿಯಾಗಿರುವುದಿಲ್ಲ

ಆ) ಸದರಿ ಕೆರೆ ಅಂಗಳದ ಸುತ್ತಲೂ ಹಿಡುಬಳಿಜಮೀನು ಇದ್ದು ಹಿಡುವಳಿ ಜಮೀನುಗಳಿಗೆ ಬೇಲಿ ಹಾಕಿಕೊಂಡಿರುತ್ತಾರೆ.

ಕೆರೆಯ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.

ಇ) ತೆರವು ಮಾಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬಡ ರೈತರಿಗಾಗಿ ಬಿಡುಗಡೆಯಾದ ಸವಲತ್ತುಗಳು

871 (1033) ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-01ನೇ ಸಾಲಿನಲ್ಲಿ ಕರ್ನಾಟಕ ರಾಜ್ಯಾದ್ಯಂತ ಬಡ ರೈತರಿಗಾಗಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದವರಿಗೆ ಸವಲತ್ತುಗಳ ಬಗ್ಗೆ ಬಿಡುಗಡೆಯಾದ ಯೋಜನೆಗಳು ಯಾವುವು? ಅವುಗಳ ಮೊತ್ತವೆಷ್ಟು?

ಆ) ಈ ರೀತಿಯಾಗಿ ಬಿಡುಗಡೆಯಾದ ಯೋಜನೆಗಳನ್ವಯ ವಿರುವ ಸವಲತ್ತುಗಳ ಪೈಕಿ ಉಪಕರಣಗಳೂ ಕೀಳು ಮಟ್ಟದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಇ) ಬಿಡುಗಡೆಯಾದ ರಸಗೊಬ್ಬರ ಬಿತ್ತನೆ ಬೀಜ ಮುಂತಾದವುಗಳು ಸರಿಯಾದ ವೇಳೆಯಲ್ಲಿ ರೈತರಿಗೆ ಬಿಡುಗಡೆಯಾದಗಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಕೃಷಿ ಇಲಾಖೆಗೆ ಸಂಬಂಧಿಸಿದಂತೆ: 2000-01 ನೇ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ಸಣ್ಣ ಮತ್ತು ಅತಿ ಸಣ್ಣ ಹಾಗೂ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ರೈತರಿಗೆ ಅನುದಾನ ಒದಗಿಸಲಾಗಿದೆ.

ಕ್ರ.ಸಂ.	ಯೋಜನೆಗಳ ವಿವರ	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
1.	ಎಣ್ಣೆ ಕಾಳು ಯೋಜನೆ	558.30
2.	ಸಮಗ್ರ ಏಕದಳಧಾನ್ಯ ಅಭಿವೃದ್ಧಿ ಯೋಜನೆ (ಒರಟು ಧಾನ್ಯ)	365.86
3.	ವೇಗವರ್ಧಕ ಮುಸುಕಿನ ಜೋಳ ಅಭಿವೃದ್ಧಿ ಯೋಜನೆ	69.15
4.	ಭತ್ತದ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ	26.65
5.	ಒರಟು ಧಾನ್ಯ ಕಿರು ಚೀಲ ಪ್ರಾತ್ಯಕ್ಷಿಕೆ ಯೋಜನೆ	21.91
6.	ಗೋಧಿ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ	2.70
7.	ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ	108.30
8.	ಸಣ್ಣ ಟ್ರಾಕ್ಟರ್ ವಿತರಣೆ	60.30
9.	ಪ್ಲೈಟೆಕ್ ಕೃಷಿಯಂತ್ರೋಪಕರಣ	25.00
10.	ಪವರ್ ಟಿಲ್ಲರ್ ವಿತರಣೆ ಯೋಜನೆ	35.00
11.	ಸಂಭಾಕ್ಸ್ ಯೋಜನೆ	82.80
12.	ವಿಶೇಷ ಘಟಕ ಯೋಜನೆ (ಪ.ಜಾ. ರೈತರಿಗೆ)	163.02
13.	ಗಿರಿಜನ ಉಪಯೋಜನೆ (ಪ.ಜಾ. ರೈತರಿಗೆ)	43.24

ಜಲಾನಯನ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ

ಜಲಾನಯನ ಅಭಿವೃದ್ಧಿ ಇಲಾಖೆ ಅಡಿಯಲ್ಲಿ 2000-2001ನೇ ಸಾಲಿನಲ್ಲಿ ಬಡ ರೈತರಿಗಾಗಿ ಯಾವುದೇ ಯೋಜನೆಗಳಿಲ್ಲವಾದಿಲ್ಲ.

ಪರಿಶಿಷ್ಟ ಜಾತಿಯವರ ಸವಲತ್ತುಗಳ ಬಗ್ಗೆ ಜಿಲ್ಲಾ ವಲಯ ಅಡಿಯಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಪರಿಶಿಷ್ಟ ಪಂಗಡದವರ ಸವಲತ್ತುಗಳ ಬಗ್ಗೆ ಜಿಲ್ಲಾ ವಲಯದ ಅಡಿ ಗಿರಿಜನ ಉಪಯೋಜನೆಗಳಿದ್ದು, ಅವುಗಳು ಈ ಕೆಳಕಂಡಂತಿವೆ

1. ತಡೆ ಅಣೆ

2. ಕಿಂಡಿ ತಡೆ ಅಣೆ (ವೆಂಟಿಡ್ ಡ್ಯಾಂ)

3. ಕೃಷಿ ಹೊಂಡ

4. ಅಲ್ಪ ಆಳದ ಬಾವಿಗಳು (5) ಕೊರಕಲು ಅಡೆಗಳು

5. ಭೂ ಮಟ್ಟ ಮಾಡುವುದು.

ಅನುದಾನ (2000-2001ನೇ ಸಾಲಿಗೆ) ರೂ. ಲಕ್ಷಗಳಲ್ಲಿ

1. ವಿಶೇಷ ಘಟಕ ಯೋಜನೆ	48.33
(ಜಿಲ್ಲಾ ವಲಯ)	
2. ಗಿರಿಜನ ಉಪಯೋಜನೆ	17.40
(ಜಿಲ್ಲಾ ವಲಯ)	
ಒಟ್ಟು	**65.73**

ಅ) ಕೃಷಿ ಇಲಾಖೆಗೆ ಸಂಬಂಧಿಸಿದಂತೆ :-

ಆ) ಈ ಯೋಜನೆಯಡಿಯಲ್ಲಿ ಬರುವ ಉಪಕರಣಗಳನ್ನು ಜಿಲ್ಲಾ ಮಟ್ಟದ ಕೃಷಿ ಉಪಕರಣಗಳನು ಸಲಹಾ ಸಮಿತಿಯಿಂದ ಆಯ್ಕೆ ಮಾಡಲಗುತ್ತಿದೆ. ಕೀಳು ಮಟ್ಟದ ಉಪಕರಣಗಳ ವಿತರಣೆಯ ಪ್ರಕರಣಗಳು ಚಾಲ್ತಿ ವರ್ಷದಲ್ಲಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ ಪ್ರಶ್ನೆಯು ಜಲಾನಯನ ಅಭಿವೃದ್ಧಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ ಪ್ರಶ್ನೆಯು ಜಲಾನಯನ ಅಭಿವೃದ್ಧಿ ಇಲಾಖೆಗೆ ಅನ್ವಯಿಸುವುದಿಲ್ಲ.

ಇ) ಕೃಷಿ ಇಲಾಖೆಗೆ ಸಂಬಂಧಿಸಿದಂತೆ :-

ಸಕಾಲದಲ್ಲಿ ಪರಿಕರಗಳು ಲಭ್ಯವಾಗರಿರುವ ಕೆಲಪ್ರಕರಣಗಳು ಗಮನಕ್ಕೆ ಬಂದಿದ್ದು ಸರ್ಕಾರದ ಕ್ರಮಗಳು ಇಂತಿವೆ :

1) ತಾಲ್ಲೂಕು ಪಂಚಾಯಿತಿಯಲ್ಲಿ ಗ್ರಾಮಗಳ ಮತ್ತು ಫಲಾನುಭವಿಗಳ ಸಕಾಲಿಕ ಆಯ್ಕೆ

2) ಆರ್ಥಿಕ ಇಲಾಖೆಯಿಂದ ಪ್ರತಿ ತಿಂಗಳು 1: 12 ಅನುದಾನ ಬಿಡುಗಡೆಗೆ ಬದಲಾಗಿ ಅವಶ್ಯಕ ಅನುದಾನ ಒದಗಿಸುವಂತೆ ಜಿಲ್ಲಾ ಪಂಚಾಯತಿಗಳಿಗೆ ಸೂಚಿಸಲಾಗುತ್ತಿದೆ.

3) ಆಯ್ದ ಫಲಾನುಭವಿಗಳು ಸಕಾಲದಲ್ಲಿ ತಮ್ಮ ಪಾಲಿನ ಹಣ ಭರಿಸದಿದ್ದಲ್ಲಿ ಪರ್ಯಾಯ ಫಲಾನುಭವಿಗಳನ್ನು ಸಹ ಆಯ್ಕೆ ಮಾಡಲು ತಿಳಿಸಲಾಗಿದೆ.

ಈ ಪ್ರಶ್ನೆಯು ಜಲಾನಯನ ಅಭಿವೃದ್ಧಿ ಇಲಾಖೆಗೆ ಅನ್ವಯಿಸುವುದಿಲ್ಲ.

ಸೇಡಂ ಕೇಂದ್ರ ಸ್ಥಾನದಲ್ಲಿ ಬೀಜೋತ್ಪಾದನ ಕೇಂದ್ರದ ಸ್ಥಾಪನೆ

872 (1280) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕೇಂದ್ರ ಸ್ಥಾನದಲ್ಲಿ 2001-02 ಸಾಲಿನ ಆಯವ್ಯಯದಲ್ಲಿ ಕೃಷಿ ಬೀಜೋತ್ಪಾದನಾ ಕೇಂದ್ರವನ್ನು ಸೇರಿಸಲು ಸರ್ಕಾರದ ಯೋಜನೆಯಲ್ಲಿದೆಯೇ.

ಆ) ಇದ್ದರೆ ಈ ವರ್ಷದ ಆಯವ್ಯಯದಲ್ಲಿ ನಿಗಧಿಪಡಿಸಲಾಗುವ ಹಣವೆಷ್ಟು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಧಾರವಾಡ ಕೃಷಿ ವಿ.ವಿ. ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವುದು

873 (917) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾಲಯವು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಗತ್ಯಕ್ಕೆ ತಕ್ಕಂತೆ ಸರ್ಕಾರದಿಂದ ಅನುದಾನ ದೊರೆಯದಿರುವುದರಿಂದ ವಿಶ್ವವಿದ್ಯಾಲಯ ಈ ಪರಿಸಿದ್ಧತೆ ಎದುರಿಸುತ್ತಿರುವುದು ನಿಜವೇ?

ಇ) ಕಳೆದ 3 ವರ್ಷಗಳಿಂದ ಸರ್ಕಾರ ಈ ವಿಶ್ವವಿದ್ಯಾಲಯಕ್ಕೆ ನೀಡಿರುವ ವಾರ್ಷಿಕ ಅನುದಾನ ವೆಷ್ಟು? (ವರ್ಷವಾರು ಮಾಹಿತಿ ನೀಡುವುದು)

ಈ) ಸದರಿ ವಿಶ್ವವಿದ್ಯಾಲಯದಲ್ಲಿ ಇರುವ ಒಟ್ಟು ಸಿಬ್ಬಂದಿಗಳು ಎಷ್ಟು? ಇವರಿಗೆ ನೀಡುತ್ತಿರುವ ಒಟ್ಟು ವಾರ್ಷಿಕ ವೇತನ ಎಷ್ಟು?

ಉ) ಈ ವಿಶ್ವ ವಿದ್ಯಾಲಯವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವಲ್ಲಿ ಸರ್ಕಾರದವರು ಏನಾದರೂ ಯೋಜನೆಯನ್ನು ರೂಪಿಸಲಾಗಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಮಂತ್ರಿಗಳು) :

ಅ) ಹೌದು